# ನಿಮ್ಮೊಡನೆ

# ಭಾರತದಲ್ಲಿ ಹೆಣ್ಣಾಗಿ ಹುಟ್ಟಬೇಡ..!

'ಜಿ20 ರಾಷ್ಟ್ರಗಳ ಪೈಕಿ ಮಹಿಳೆಯಾಗಿರಲು ಅತಿ ಕೆಟ್ಟದಾದ ದೇಶ ಭಾರತ' ಎಂದು ಸಮೀಕ್ಷೆ ಹೇಳಿರುವುದು ನಮಗೆ ಎಚ್ಚರಿಕೆಯ ಗಂಟೆಯಾಗಬೇಕಿದೆ. ಈ ಸಮೀಕ್ಷೆಯ ಅತ್ಯಂತ ಆಘಾತಕಾರಿ ಅಂಶ ಎಂದರೆ ಮಹಿಳೆಯರ ಶೋಷಣೆಯಲ್ಲಿ ಸೌದಿ ಅರೇಬಿಯಾಗಿಂತಲೂ ಭಾರತದ ಸ್ಥಾನ ಕೆಳಗಿರುವುದು.

ಹೆಣ್ಣುಶಿಶು ಹತ್ಯೆ, ಬಾಲ್ಯ ವಿವಾಹ, ಕೌಟುಂಬಿಕ ದೌರ್ಜನ್ಯ, ವರದಕ್ಷಿಣೆ ಸಮಸ್ಯೆಗಳ ವಿರುದ್ಧದ ಹೋರಾಟ ಭಾರತದಲ್ಲಿ ಇನ್ನೂ ಮುಗಿದಿಲ್ಲ. 21ನೇ ಶತಮಾನದ ಈ ಆಧುನಿಕ ಕಾಲದಲ್ಲೂ ಜ್ವಲಂತವಾಗಿರುವ ಈ ಸಮಸ್ಯೆಗಳು ಭಾರತಕ್ಕೆ ಜಾಗತಿಕ ಮಟ್ಟದಲ್ಲಿ ಅಷ್ಟೇನೂ ಒಳ್ಳೆ ಹೆಸರು ತರುವಂತಹದಲ್ಲ. ಈ ಮಾತಿಗೆ ಪೂರಕವಾಗಿ ಈಗ ಸಮೀಕ್ಷೆಯೊಂದರ ವರದಿ ನಮ್ಮ ಎದುರಿಗಿದೆ. ಈ ಪ್ರಕಾರ, ಜಿ20 ರಾಷ್ಟ್ರಗಳ ಪೈಕಿ ಭಾರತದ ಸ್ಥಾನ ಕಟ್ಟಕಡೆಯದಾಗಿದೆ. 'ಮಹಿಳೆಯಾಗಿರಲು ಅತಿ ಕೆಟ್ಟದಾದ ದೇಶ ಭಾರತ' ಎಂದು ಈ ಸಮೀಕ್ಷೆ ಹೇಳಿದೆ. ಥಾಮ್ಸನ್ ರಾಯಿಟರ್ಸ್ ಫೌಂಡೇಷನ್ ಈ ಸಮೀಕ್ಷೆ ನಡೆಸಿದೆ.

ಮಹಿಳೆಗೆ ಸಂಬಂಧಿಸಿದಂತೆ ಅತ್ಯುತ್ತಮ ಹಾಗೂ ಕೆಟ್ಟ ರಾಷ್ಟ್ರಗಳೆಂದು ಜಿ 20 ರಾಷ್ಟ್ರಗಳನ್ನು ವರ್ಗೀಕರಿಸಲು, ಲಿಂಗತಾರತಮ್ಯ ವಿಚಾರಗಳಲ್ಲಿ ಪರಿಣತರಾದ ಶೈಕ್ಷಣಿಕ ತಜ್ಞರು, ಆರೋಗ್ಯ ಕಾರ್ಯಕರ್ತರು, ನೀತಿ ನಿರೂಪಕರು, ಪತ್ರಕರ್ತರು, ದಾನಿಸಂಸ್ಥೆಗಳ ವೃತ್ತಿಪರರು ಹಾಗೂ ಅಭಿವೃದ್ಧಿ ತಜ್ಞರನ್ನು ಥಾಮ್ಸನ್ ರಾಯಿಟರ್ಸ್ ಫೌಂಡೇಷನ್‌ನ ವಾರ್ತಾಸೇವೆ 'ಟ್ರಸ್ಟ್ ಲಾ' ಕೇಳಿತ್ತು. ಒಟ್ಟು ಐದು ಖಂಡಗಳ 63 ರಾಷ್ಟ್ರಗಳಲ್ಲಿನ 370 ತಜ್ಞರು ಈ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದರು. ವಿಶ್ವದ ದೊಡ್ಡ ಅರ್ಥವ್ಯವಸ್ಥೆಗಳಾಗಿರುವ ಜಿ20 ರಾಷ್ಟ್ರಗಳಲ್ಲಿ ಮಹಿಳೆಯರ ಸ್ಥಿತಿಗತಿ ಹೇಗಿದೆ ಎಂಬುದರ ವಿಶ್ಲೇಷಣೆಗಾಗಿ ಈ ಸಮೀಕ್ಷೆ ಕೈಗೊಳ್ಳಲಾಗಿತ್ತು. ಮೆಕ್ಸಿಕೊದಲ್ಲಿ ಜೂನ್ 18ರ ಜಿ20 ಶೃಂಗಸಭೆಗೆ ಮುನ್ನವೇ ಈ ವರದಿ ಬಿಡುಗಡೆ ಆಗಿದೆ.

ಹೆಣ್ಣನ್ನು ತಾಯಿ, ದೇವತೆ ಎಂದೆಲ್ಲಾ ಪೂಜಿಸುವ ನಮ್ಮ ನಾಡಿನಲ್ಲಿ ಆಕೆ ದಾಸಿಯೂ ಆಗಿದ್ದಾಳೆ. ಸದಾ ಗಂಡಿನ ಆಶ್ರಯದಲ್ಲಿ ಎಂದರೆ ತಂದೆ, ಗಂಡ ಅಥವಾ ಮಗನ ಆಶ್ರಯದಲ್ಲಿರಬೇಕಾದವಳು ಎಂಬಂತಹ ಮನಸ್ಥಿತಿ ತೀರಾ ಬದಲಾಗಿಲ್ಲ. ಹೀಗಾಗಿಯೇ 'ವರದಕ್ಷಿಣೆ'ಯ ಪೆಡಂಭೂತ ನಮ್ಮ ಹೆಣ್ಣುಮಕ್ಕಳ ಬದುಕನ್ನು ಅಪಮೌಲ್ಯಗೊಳಿಸುತ್ತಿರುವ ವಿದ್ಯಮಾನಗಳನ್ನು ದಿನನಿತ್ಯ ನಾವು ಕಾಣುತ್ತಿದ್ದೇವೆ. ಈ ವಿದ್ಯಮಾನಗಳು ಜಾಗತಿಕವಾಗಿ ಭಾರತದ ಸ್ಥಾನಮಾನವನ್ನು ಕುಗ್ಗಿಸಿರುವ ಪರಿ ನಮಗೀಗ ಎಚ್ಚರಿಕೆಯ ಗಂಟೆಯಾಗಬೇಕಿದೆ. ಈ ಸಮೀಕ್ಷೆಯ ಅತ್ಯಂತ ಆಘಾತಕಾರಿ ಅಂಶ ಎಂದರೆ ಸೌದಿ ಅರೇಬಿಯಾಗಿಂತಲೂ ಭಾರತದ ಸ್ಥಾನ ಕೆಳಗಿರುವುದು. ಸೌದಿ ಅರೇಬಿಯಾದಲ್ಲಿ ಮಹಿಳೆಯ ಜೀವನ ಪೂರ್ಣ ಪುರುಷರ ನಿಯಂತ್ರಣದಲ್ಲಿದೆ ಎಂಬುದು ಎಲ್ಲರಿಗೂ ತಿಳಿದಿರುವ ಸತ್ಯ. ಮಹಿಳೆಯರು ಸುಶಿಕ್ಷಿತರಾಗಿದ್ದರೂ ರಸ್ತೆಗಳಲ್ಲಿ ವಾಹನಗಳನ್ನು ಚಲಾಯಿಸುವ ಸ್ವಾತಂತ್ರ್ಯವೂ ಸೌದಿ ಮಹಿಳೆಯರಿಗಿಲ್ಲ. ಮತ್ತೆ ಸೌದಿ ಮಹಿಳೆಯರು ಮತದಾನದ ಹಕ್ಕು ಪಡೆದದ್ದೂ ತೀರಾ ಇತ್ತೀಚೆಗೆ ಎಂದರೆ 2011ರಲ್ಲಿ. ಭಾರತದಲ್ಲಿ ಈ ಎಲ್ಲಾ ಸ್ವಾತಂತ್ರ್ಯಗಳು ಮಹಿಳೆಗೆ ಇವೆ. ಹೀಗಿದ್ದೂ ಸೌದಿ ಅರೇಬಿಯಾಗಿಂತಲೂ ಭಾರತದ ಸ್ಥಾನ ಕಟ್ಟಕಡೆಯದಾಗಿದ್ದು ಹೇಗೆ? ಬಹುಶಃ ಸೌದಿಯ ಸಂಪತ್ತಿನಿಂದಾಗಿ ಮಹಿಳೆಯರಿಗೆ ಅಲ್ಲಿ ಸಿಗುತ್ತಿರುವ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯ ಉನ್ನತ ಗುಣಮಟ್ಟದ್ದು. ಆದರೆ ಭಾರತದಲ್ಲಿ ಹೆಣ್ಣುಮಕ್ಕಳನ್ನು ಕಾಡುತ್ತಿರುವ ಸಾಮಾಜಿಕ ಪಿಡುಗುಗಳ ಜೊತೆಗೇ ಹೆಣ್ಣುಮಕ್ಕಳ ಸಾಗಣೆಯೂ ಹೆಚ್ಚುತ್ತಿದೆ. ಹೆರಿಗೆಗಳಲ್ಲಿ ಸಾಯುವ ತಾಯಂದಿರ ಪ್ರಮಾಣವೂ ಭಾರತದಲ್ಲಿ ಹೆಚ್ಚಿರುವುದು ಬಹುಶಃ ಭಾರತ ಕಟ್ಟಕಡೆಯ ಸ್ಥಾನಕ್ಕಿಳಿಯಲು ಕಾರಣವಾಗಿದೆ. ಸೌದಿಯ ನಂತರದ ಸ್ಥಾನ ಪಡೆದ ದೇಶಗಳು ಇಂಡೋನೇಷ್ಯಾ, ದಕ್ಷಿಣ ಆಫ್ರಿಕಾ ಹಾಗೂ ಮೆಕ್ಸಿಕೊ.

ಹಾಗಿದ್ದರೆ ಈ ಜಗತ್ತಿನಲ್ಲಿ ಜಿ20 ರಾಷ್ಟ್ರಗಳ ಪೈಕಿ ಮಹಿಳೆಯರಾಗಿರುವುದಕ್ಕೆ ಅತ್ಯುತ್ತಮ ದೇಶ ಯಾವುದು? ಲಿಂಗ ಸಮಾನತೆ ಪ್ರೋತ್ಸಾಹಿಸುವ ನೀತಿಗಳು, ಹಿಂಸೆ, ಶೋಷಣೆ ವಿರುದ್ಧದ ರಕ್ಷಣಾತ್ಮಕ ಕ್ರಮಗಳು ಹಾಗೂ ಆರೋಗ್ಯ ಸೌಲಭ್ಯಗಳಿಂದಾಗಿ ಕೆನಡಾ ಅತ್ಯಂತ 'ಮಹಿಳಾ ಸ್ನೇಹಿ' ರಾಷ್ಟ್ರವಾಗಿ ಹೊರಹೊಮ್ಮಿದೆ. ನಂತರದ ಸ್ಥಾನಗಳು ಕ್ರಮವಾಗಿ ಜರ್ಮನಿ, ಬ್ರಿಟನ್, ಆಸ್ಟ್ರೇಲಿಯಾ ಹಾಗೂ ಫ್ರಾನ್ಸ್‌ಗೆ ಸಿಕ್ಕಿವೆ. ಈ ಸಮೀಕ್ಷೆಯಲ್ಲಿ ಅಮೆರಿಕಕ್ಕೆ ಸಿಕ್ಕಿರುವ ಸ್ಥಾನ ಆರನೆಯದು. ಇದು ಬರೀ ಗ್ರಹಿಕೆಗಳನ್ನಾಧರಿಸಿದ ಸಮೀಕ್ಷೆಯಾದರೂ ವಿಶ್ವಸಂಸ್ಥೆ ಅಂಕಿ ಅಂಶಗಳು ಈ ಗ್ರಹಿಕೆಗೆ ಪೂರಕವಾಗಿಯೇ ಇವೆ.

ಮಹಿಳೆಯರ ಸ್ಥಿತಿಗತಿ ಸುಧಾರಣೆಗೆ ಭಾರತದಲ್ಲಿ ಅನೇಕ ಮಹಿಳಾ ಪರ ಕಾನೂನುಗಳು ಜಾರಿಯಲ್ಲಿವೆ. ಹೀಗಿದ್ದೂ ಆಕೆಯ ಕಟ್ಟಕಡೆಯ ಸ್ಥಿತಿಯತ್ತ ಬೆಳಕು ಚೆಲ್ಲುತ್ತಿರುವ ಈ ವರದಿಯನ್ನು ರಾಷ್ಟ್ರದ ನೀತಿನಿರೂಪಕರು ಗಂಭೀರವಾಗಿ ಪರಿಗಣಿಸಬೇಕಿದೆ. ಮಹಿಳೆಯನ್ನು ಕಾಣುವ ದೃಷ್ಟಿಕೋನವೇ ಸಮಾಜದಲ್ಲಿ ಬದಲಾಗಬೇಕಿದೆ. ಈ ನಿಟ್ಟಿನಲ್ಲಿ ಭಾರತ ಸಾಗಬೇಕಿರುವ ಹಾದಿ ಇನ್ನೂ ಸುದೀರ್ಘವಾದುದು.

■ ಸಿ.ಜಿ.ಮಂಜುಳಾ



ವಿಷ್ಣು